ಇ-ಆಡಳಿತಕೇಂದ್ರ

ಸಿಬ್ಬಂದಿಮತ್ತುಆಡಳಿತಸುಧಾರಣಾಇಲಾಖೆ (ಇ-ಆಡಳಿತ)

1ನೇಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-01

ಸಂಖ್ಯೆ: CEG-KCOM011/1/2022-KCOM-CeG ದಿನಾಂಕ: 01-02-2022

# ಸಾರ್ವಜನಿಕ ಪ್ರಕಟಣೆ

**ವಿಷಯ** :- ಕನ್ನಡಕ್ಕಾಗಿ ಫ಼ಾಂಟ್‌ಗಳನ್ನು ರೂಪಿಸಲು ಕೊಟೇಶನ್ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇ-ಆಡಳಿತ ಕೇಂದ್ರ, ಇ-ಕನ್ನಡ ಯೋಜನೆಯಡಿಯಲ್ಲಿ ಕನ್ನಡಕ್ಕಾಗಿ ಫ಼ಾಂಟ್‌ಗಳನ್ನು ರೂಪಿಸಬೇಕಾಗಿದ್ದು, ಫ಼ಾಂಟ್ ಅಭಿವೃದ್ಧಿಪಡಿಸಲು ಕೊಟೇಶನ್ ಆಹ್ವಾನಿಸಿದೆ.

ಉದ್ದೇಶಿತ ಕನ್ನಡ ಫ಼ಾಂಟ್‌ಗಳು ಕೆಳಕಂಡ ಅಂಶಗಳಿಗೆ ಅನುರೂಪವಾಗಿರಬೇಕು.

1. ಇ-ಆಡಳಿತ ಕೇಂದ್ರವು ರೂಪಿಸಿದ ಫಾಂಟ್ ತಯಾರಿಕೆ ಕುರಿತ ವಿಸ್ತೃತ ಯೋಜನಾ ವರದಿಯಲ್ಲಿರುವ ಫಾಂಟ್ ನಕಾಶೆಯ ಎಲ್ಲ ಅಂಶಗಳನ್ನೂ ಪಾಲಿಸಬೇಕು.
2. ಉದ್ದೇಶಿತ ಫ಼ಾಂಟ್‌ಗಳು ಯೂನಿಕೋಡ್ ಆಧಾರಿತ ಓಪನ್‌ಟೈಪ್ ಫಾಂಟ್ ಆಗಿರಬೇಕು.
3. ಕನ್ನಡ ಯುನಿಕೋಡ್ ಬ್ಲಾಕ್‌ನಲ್ಲಿರುವ ಎಲ್ಲ ಅಕ್ಷರಗಳನ್ನು ಸಮರ್ಥವಾಗಿ ರೂಪಿಸುವುದಲ್ಲದೇ ಈಗಾಗಲೇ ಲಭ್ಯವಿರುವ ಇತರ ಕನ್ನಡ ಯೂನಿಕೋಡ್ ಫ಼ಾಂಟುಗಳಂತೆ ರೋಮನ್ ಅಕ್ಷರಗಳಿಗೂ ಉದ್ದೇಶಿತ ಫ಼ಾಂಟ್ ಬೆಂಬಲ ನೀಡಬೇಕು
4. ಕನ್ನಡದ ಎಲ್ಲ ಮೂಲಾಕ್ಷರಗಳು, ಗುಣಿತಾಕ್ಷರಗಳು, ಸಂಯುಕ್ತಾಕ್ಷರಗಳು ಸರಿಯಾಗಿ ಮೂಡಬೇಕು
5. ವೇದಗಳನ್ನು ಕನ್ನಡ ಲಿಪಿಯಲ್ಲಿ ಮೂಡಿಸಲು ಯೂನಿಕೋಡ್ ವೇದಿಕ್ ಎಕ್ಸ್‌ಟೆನ್ಷನ್ ಬ್ಲಾಕ್ ಮತ್ತು ಯುನಿಕೋಡ್ ನಕಾಶೆಯಲ್ಲಿ ಲಭ್ಯವಿರುವ ಬ್ಲಾಕ್‌ಗಳ ಅನುಸಾರ ಭಾರತೀಯ ಸಾಂಸ್ಕೃತಿಕ ಚಿಹ್ನೆಗಳಿಗೂ ಈ ಉದ್ದೇಶಿತ ಯೂನಿಕೋಡ್ ಫ಼ಾಂಟ್‌ಗಳು ಬೆಂಬಲ ನೀಡಬೇಕು.
6. ಬುಕ್ ಫಾಂಟ್ (ಪಠ್ಯಕ್ಕೆ ಬಳಸುವ, ಸರ್ವಸಾಮಾನ್ಯವಾಗಿ ಎಲ್ಲೆಡೆ ಬಳಕೆಯಾಗುವ) ನಮೂನೆಯ ಅಕ್ಷರಶೈಲಿಯದಾಗಿರಬೇಕು. ಯಾವುದೇ ತಾಂತ್ರಿಕ ದೋಷಕ್ಕೆ ಒಳಪಡಬಾರದು.
7. ಅಕ್ಷರ ವಿನ್ಯಾಸಗಳನ್ನು ವಿನ್ಯಾಸಿಸಲು ಬಳಸುವ ತಂತ್ರಾಂಶಗಳು ಲಭ್ಯವಿರುವ ಮುಕ್ತ/ ಉಚಿತ ಮತ್ತು ಅವಶ್ಯವಿದ್ದಲ್ಲಿ ಮಾತ್ರ ಪರವಾನಿಗೆ ಪಡೆದ ತಂತ್ರಾಂಶಗಳಾಗಿರಬೇಕು.
8. ಅಕ್ಷರ ವಿನ್ಯಾಸಗಳ ಮೆಟ್ರಿಕ್ಸ್ ಮತ್ತು ಕರ್ನಿಂಗ್‌ಪೇರ್ ಸೂಕ್ಷ್ಮತೆಯಿಂದಲೂ ಗಮನಿಸಿದಾಗ ಸರಿಯಾಗಿ ಹೊಂದಿಕೊಂಡಿರಬೇಕು. ರೂಪಸ್ಥಿರತೆ ಹೊಂದಿರಬೇಕು.
9. ಬರವಣಿಗೆಯಲ್ಲಿ ಬಳಕೆ ಮಾಡುವ ಅಕ್ಷರಗಳ ಸ್ಥಾನ, ಬಳಕೆ ಮಾಡುವ ತಂತ್ರಾಂಶಗಳ ಅಕ್ಷರ ವಿನ್ಯಾಸಗಳ ಸ್ಥಾನ ಮತ್ತು ಮುದ್ರಣ ಒಂದೇ ರೀತಿ ಇರುವಂತಹ ಅಕ್ಷರ ವಿನ್ಯಾಸಗಳಾಗಿರಬೇಕು.
10. ಅಕ್ಷರ ವಿನ್ಯಾಸಗಳು ಕನ್ನಡ ಫಾಂಟ್ ಪರಂಪರೆಯ ಶಿಸ್ತು, ಸೌಂದರ್ಯ ಮತ್ತು ಅಚ್ಚುಕಟ್ಟುತನವನ್ನು ಅಳವಡಿಸಿಕೊಂಡು ಅತ್ಯಂತ ಸಹಜ ಮತ್ತು ಸರಳ ಸ್ವರೂಪ ಹೊಂದಿರಬೇಕು.

ಯೋಜನಾ ನಿರ್ದೇಶಕರು
ಇ-ಕನ್ನಡ ಯೋಜನೆ
ಇ-ಆಡಳಿತ ಕೇಂದ್ರ

080-2203 2505 pd.kannada@karnataka.gov.in

ಇ-ಆಡಳಿತಕೇಂದ್ರ

ಸಿಬ್ಬಂದಿಮತ್ತುಆಡಳಿತಸುಧಾರಣಾಇಲಾಖೆ (ಇ-ಆಡಳಿತ)

1ನೇಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-01



11. ಅಕ್ಷರ ಭಾಗಗಳನ್ನು ಅಂತಿಮಗೊಳಿಸುವ ಮೊದಲು ಇ-ಆಡಳಿತ ಕೇಂದ್ರದ ಪೂರ್ವಾನುಮತಿ ಪಡೆಯಬೇಕು.
12. ಇದರಲ್ಲಿ ಫಾಂಟ್ ಫ್ಯಾಮಿಲಿಯ ಎಲ್ಲ ಫಾಂಟ್‌ಗಳೂ ಇರಬೇಕು (ಲೈಟ್, ನಾರ್ಮಲ್, ಬೋಲ್ಡ್) ಮತ್ತು ಪೇಜಿನೇಶನ್ ತಂತ್ರಾಂಶಗಳ ಕಂಡೆನ್ಸ್–ಎಕ್ಸ್‌ಪ್ಯಾಂಡ್ ಇತ್ಯಾದಿ ವಿನ್ಯಾಸಗಳಿಗೆ ಒಗ್ಗುವ ಹಾಗಿರಬೇಕು.
13. ಫ಼ಾಂಟ್‌ಗಳಲ್ಲಿ ರೆಂಡರಿಂಗ್ ಮೊದಲಾದ ದೋಷಗಳು ಕಂಡುಬಂದಲ್ಲಿ ಸರಿಪಡಿಸುವಿಕೆ ಸೇರಿದಂತೆ ನಿರ್ವಹಣೆಯ ಹೊಣೆಯನ್ನು ಫ಼ಾಂಟ್ ರೂಪಿಸುವವರು ವಹಿಸಿಕೊಳ್ಳಬೇಕು.
14. ಫಾಂಟ್ Digitally Signed ಆಗಿದ್ದು OFL ಲೈಸೆನ್ಸ್ ಬಳಸಬೇಕು
15. ಮುಖ್ಯವಾದ ಕಾರ್ಯಾಚರಣಾ ವ್ಯವಸ್ಥೆಗಳಾದ ವಿಂಡೋಸ್, ಲಿನಕ್ಸ್ ಮತ್ತು ಮ್ಯಾಕ್‌ಗಳಲ್ಲಿ ಅನ್ವಯಿಸುವಂತಿರಬೇಕು.
16. ಫಾಂಟ್‌ನ ಎಲ್ಲ ಮೂಲ ಚಿತ್ರಗಳನ್ನು, ಕೋಡ್‌ಗಳನ್ನು, ಫಾಂಟ್ ತಯಾರಿಕಾ ತಂತ್ರಾಂಶದಲ್ಲಿ ಬಳಸಿದ ಅಕ್ಷರಭಾಗಗಳನ್ನು, ತಂತ್ರಾಂಶದ ಆಕರ ಸಂಕೇತಗಳನ್ನು ಸಂಪೂರ್ಣವಾಗಿ ಸರ್ಕಾರಕ್ಕೆ ಸಲ್ಲಿಸಬೇಕು.
17. ಫಾಂಟ್ ತಯಾರಿಸುವವರು ಕನ್ನಡ ಭಾಷಾ ಜ್ಞಾನವನ್ನು ಹೊಂದಿರಬೇಕು ಮತ್ತು ಫಾಂಟ್ ತಯಾರಿಕೆಯಲ್ಲಿ ಮೂರು ವರ್ಷಗಳ ಅನುಭವವನ್ನೂ ಹೊಂದಿರಬೇಕು.
18. ಉದ್ದೇಶಿತ ಫ಼ಾಂಟ್‌ಗಳ ಒಡೆತನವನ್ನು ಕರ್ನಾಟಕ ಸರ್ಕಾರವು ಹೊಂದುತ್ತದೆ. ಈ ಫಾಂಟ್‌ಗಳನ್ನು ಪ್ರಯೋಗಾರ್ಥ ಉಚಿತವಾಗಿ ಬಳಸಿದ ಮೇಲೆ ಅದನ್ನು ದೃಢೀಕರಿಸಿ ಮುಕ್ತ ಆಕರವಾಗಿ ಬಿಡುಗಡೆ ಮಾಡುತ್ತದೆ.

ಆಸಕ್ತ ತಂತ್ರಾಂಶ ಅಭಿವೃದ್ಧಿದಾರರು ತಮ್ಮ ಕೊಟೇಶನ್‌ಗಳನ್ನು ದಿನಾಂಕ:10-02-2022 ರೊಳಗೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಇ-ಆಡಳಿತ ಕೇಂದ್ರ, 1ನೇ ಮಹಡಿ, ಎರಡನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು-01 ಹಾಗೂ ಮಿಂಚಂಚೆ ವಿಳಾಸ pd.kannada@karnataka.gov.in ಇಲ್ಲಿಗೆ ಸಲ್ಲಿಸಬಹುದು.

01.02.2022

ಯೋಜನಾ ನಿರ್ದೇಶಕರು
ಇ-ಕನ್ನಡ ಯೋಜನೆ,
ಇ-ಆಡಳಿತ ಕೇಂದ್ರ.

ಯೋಜನಾ ನಿರ್ದೇಶಕರು
ಇ-ಕನ್ನಡ ಯೋಜನೆ
ಇ-ಆಡಳಿತ ಕೇಂದ್ರ

080-2203 2505 pd.kannada@karnataka.gov.in